QUESTION FOR ANSWER ON THE DAY

(but not taken up)

Proper utilisation of Loan given by Co-operative Societies

79. Sri SHEERANALY CHANDRASEKHAR, S. M. (Hosanagar).—

Will the Minister for Co-operation be pleased to state :—

(*a*) whether it has come to the notice of the Government that though the sixty-six villages of Shimoga Taluk were declared as scarcity affected area, the inspectors of Co-operative Societies are harassing for the recovery of money;

(*b*) whether the loan amount distributed through the co-operative societies for increased food production is utilised properly;

(*c*) if not, the steps taken by the Government for the proper utilisation of money ?

Sri A SHANKARA ALVA (Minister for Co-operation).—

(*a*) No village in Shimoga District was declared as scarcity affected area during 1971–72.

(*b*) Yes.

(*c*) Does not arise.

Calling Attention to a Matter of Urgent Public Importance
re : Formation of "Vishal Gomantak State"

Sri KAGODU THIMMAPPA (Sagar).—I call the attention of the Chief Minister to the reported statement of Minister of State for Home regarding formation of the "Vishal Gomantak State." ನಮ್ಮ ರಾಜ್ಯ ನಚಿವರಾದ ಶ್ರೀ ಕಿತ್ತೂರ್ ಅವರು ನಮ್ಮ ರಾಜ್ಯದ ಕೆಲವು ಭಾಗಗಳನ್ನು ಸೇರಿಸಿಕೊಂಡು ವಿಶಾಲ ಗೋವಾಂತಕ ರಾಜ್ಯದ ರಚನೆಯ ಬಗ್ಗೆ ಹೇಳಿರತಕ್ಕಂಥ ವಿಷಯ ಮೈತ್ರ, ಪತ್ರಿಕೆಗಳಲ್ಲಿ ವರದಿ ಯಾಗಿತ್ತು. ಇದರಿಂದ ನಮಗೆ ಘಾಬರಿಯಾಗಿದೆ. ನಮ್ಮ ಕರ್ನಾಟಕ ರಾಜ್ಯದ ನಚಿವರ ಬಾಯಿಂದ ಇಂತಹ ಮಾತು ಬಂದಿರುವುದನ್ನು ನೋಡಿದರೆ ನಮಗೆ ಬಹಳ ಅನುಮಾನವಾಗಿದೆ. ಮಹಾಜನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಈ ನಭೆಯಲ್ಲಿಯೇ ನರ್ವಾನುಮತದಿಂದ ತೀರ್ಮಾನವಾಗಿರುವುದರಿಂದ ಒಳಾಡಳಿತ ರಾಜ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯ ಬಗ್ಗೆ ನರ್ಕಾರದ ಅಭಿಪ್ರಾಯವಾದರೂ ಕೂಡ ಏನು ಎಂಬುದನ್ನು ತಿಳಿನಬೇಕು.

†ಶ್ರೀ ಎಚ್. ಎಂ. ಚೆನ್ನಬನಪ್ಪ (ರೋಕೋಪಯೋಗಿ ಶಾಖೆಯ ಮಂತ್ರಿಗಳು).—

ಶ್ರೀ ವಾಟಾಳ್ ನಾಗರಾಜ್.—ಈ ವಿಚಾರದಲ್ಲಿ ಹೇಳಿಕೆ ಕೊಟ್ಟಂತಹ ಮಂತ್ರಿಗಳು ನಭೆಯಲ್ಲಿ ಇರುವುದರಿಂದ ಮತ್ತು ಅವರ ಮೇಲೆ ಗುರುತರವಾದ ಆಪಾದನೆ ಇರುವುದರಿಂದ ಅವರಿಂದಲೇ ಉತ್ತರ ಕೊಡಿನಬೇಕು. ಇಲ್ಲದಿದ್ದರೆ ಅವರು ಹೇಳಿದ್ದು ನಿಜವೋ ಏನೋ ಎಂಬ ಅನುಮಾನ ನಮಗೆ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮುಖ್ಯಮಂತ್ರಿಗಳು ಈ ಚಿಕ್ಕ ಮಂತ್ರಿಗಳನ್ನು ಮೂಕ ರನ್ನಾಗಿ ಮಾಡಿ ಎಲ್ಲದಕ್ಕೂ ಅವರ ಪರವಾಗಿ ಮುಖ್ಯಮಂತ್ರಿಗಳೇ ಉತ್ತರ ಕೊಡುವುದು ಸರಿಯಲ್ಲ. ಅವರ ಬಾಯಿಂದ ಹೇಳಿಕೆ ಕೊಡಿಸಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕೆಂದು ಇದೆ. ಅವರು ಇಲ್ಲದಿರುವುದರಿಂದ ಅವರ ಪರವಾಗಿ ನಾನು ಈ ಹೇಳಿಕೆಯನ್ನು ಸಭೆಯ ಮುಂದೆ ಮಂಡನೆ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಈ ವಿಷಯ ಯಾವ ಮಂತ್ರಿಗಳಿಂದ ಪ್ರಾರಂಭವಾಯಿತೋ ಅವರೇ ಉತ್ತರ ಕೊಡಬೇಕು.

ಅಧ್ಯಕ್ಷರು.—ಆ ರೀತಿ ಆಗುವುದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ನೋಟೀಸ್ ಕೊಟ್ಟಿರುವುದು ಮುಖ್ಯಮಂತ್ರಿಗಳಿಗೆ. ಆದ್ದರಿಂದ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ರೋಕೋಪಯೋಗಿ ಇರಾಖೆಯ ಮಂತ್ರಿಗಳು ಈಗ ಕೊಡುತ್ತಾರೆ.

Sri H. M. CHANNABASAPPA.—Madam Speaker, In a section of the Press, it has been reported that Sri R. D. Kittur, Minister of State for Home has made a statement favouring the formation of the "Vishal Gomantak State" including some areas of Coastal Mysore. The report is alleged to have been based on certain reports appearing in some section of Marathi Press. The Minister of State for Home has already denied having made a statement advocating the formation of the "Vishal Gomantak State" including parts of Mysore State. I do not wish to add anything to his denial. The attitude of the Government of Mysore on the Mahajan Commission Report remains unchanged.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ತಾವು ಹೇಳಿರುವುದು ಕಿತ್ತೂರ್‌ರವರ ಹೇಳಿಕೆ ಮೇಲೆ ಹೇಳಿದ್ದೀರಿ. ಆ ಹೇಳಿಕೆಯನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಮಹಾಜನ್ ಆಯೋಗದ ವರದಿ ಬಗ್ಗೆ ನಿಮ್ಮ ನಿಲುವು ಬದಲಾವಣೆ ಆಗಿಲ್ಲವೆಂದು ತಿಳಿದಿದ್ದೇನೆ. ಇದಕ್ಕೆ ತಮ್ಮ ನಿಲುವು ಏನು ಎಂದು ಹೇಳುತ್ತೀರಾ ? ಹಿಂದಿನ ಅಸೆಂಬ್ಲಿಯಲ್ಲಿ ಏನು ತೀರ್ಮಾನವಾಗಿದೆಯೋ ಆ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವುದು ಸ್ಪಷ್ಟವಾಗಿ ಹೇಳಿಲ್ಲ, ಅದನ್ನು ಸ್ಪಷ್ಟಪಡಿಸುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ಈ ಸಭೆಯಲ್ಲಿ ಹೆಚ್ಚಿನ ಹೇಳಿಕೆ ಕೊಡುವುದು ಅಗತ್ಯವಿಲ್ಲ. ನನ್ನ ಬಂದು ಸಲಹೆ ಏನೆಂದರೆ ನೀವು ಮಹಾಜನ್ ಕಮೀಷನ್ ಕೊಟ್ಟಿರುವಂಥ ತೀರ್ಮಾನಕ್ಕೆ ಬದ್ಧರಾಗಿದ್ದೀರಾ ? ಈ ವಿಷಯ ಪ್ರಸ್ತಾಪ ಮಾಡಿದ ಮಾರನೆಯ ದಿವಸವೇ ಶ್ರೀ ಕಿತ್ತೂರ್ ರವರ ಹೇಳಿಕೆ ಬಂತು. ಬಹುಶಃ 5-6 ದಿವಸದ ಹಿಂದಿನ ಪತ್ರಿಕೆಯಲ್ಲಿ ಬಂದಿದೆ ವಿಶಾಲ ಗೋಮಾಂತಕ ರಾಜ್ಯ ಮಾಡತಕ್ಕಂಥ ಬಗ್ಗೆ ಪತ್ರಿಕೆಯಲ್ಲಿ ವರದಿ ಬಂದ ತಕ್ಷಣವೇ ಅವರು ಡಿಸ್ಯೆಡ್ ಮಾಡಬೇಕಾಗಿತ್ತು. ಸಭಾ ನಾಯಕರು ಹೇಳಿದ ಹಾಗೆ ಅನೇಕ ಮಂತ್ರಿಗಳು ಹೊಸಬರು ನಿಜ. ಆದರೆ ಇಂತಹ ಮಹತ್ವದ ವಿಚಾರದ ಬಗ್ಗೆ ಮಾತನಾಡುವಾಗ ಅವರು ಎಚ್ಚರಿಕೆ ವಹಿಸಿ ಮಾತನಾಡಬೇಕು. ಅಲ್ಲದೆ ತಾವೂ ಕೂಡ ಈಗ Code of Conduct for Ministers and Legislators ಅಂತ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದುದರಿಂದ ಮಂತ್ರಿಗಳು ಏಂಥಾ ಮುಖ್ಯವಾದ ವಿಷಯಗಳ ಮೇಲೆ ಮಾತನಾಡುವಾಗ ನಾಲಿಗೆ ಹಿಡಿತದಲ್ಲಿರಬೇಕು. ಇನ್ನುಮೇಲಾದರೂ ಕೂಡ ಎಚ್ಚರಿಕೆ ವಹಿಸಿಕೊಂಡು ಮಾತನಾಡುವುದು ಸೂಕ್ತ ಎಂದು ತಿಳಿಸುತ್ತೀರಾ ?

ಶ್ರೀ ವಾಟಾಳ್ ನಾಗರಾಜ್.—ಇದನ್ನು ಶ್ರೀ ಕಿತ್ತೂರ್ ರವರು ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಮರಾಠಿ ಪೇಪರ್ ನವರು ಸಣ್ಣ ಸಣ್ಣ ವಿಷಯಗಳನ್ನು ದೊಡ್ಡದು ಮಾಡಬಹುದು ಎನ್ನುವ ಸಂಶಯ ನನಗೆ ಬಂದಿದೆ. ಆದುದರಿಂದ ಮಾನ್ಯ ಕಿತ್ತೂರ್ ರವರನ್ನು ನಾನು ಕೇಳುತ್ತಿದ್ದೇನೆ. ಸಂಬಂಧಪಟ್ಟ ಸಚಿವರು ಅಲ್ಲಿಗೆ ಹೋಗಿದ್ದು ನಿಜವೇ, ಇಲ್ಲವೇ ? ಅಥವಾ ಮರಾಠಿ ಪೇಪರ್‌ನವರು ಹೀಗೆ ಮಾಡಿದ್ದಾರೆಯೇ, ಇದು ಮುಖ್ಯವಾದ ವಿಷಯವಾದ್ದರಿಂದ ತಾವು ತಿಳಿಸಬೇಕು.

(ಶ್ರೀ ವಾಟಾಳ್ ನಾಗರಾಜ್)

ಇನ್ನೊಂದು ವಿಷಯ ಏನೆಂದರೆ ಶ್ರೀಮಾನ್ ಕೆ. ಎಚ್. ಪಾಟೀಲರು ಹೋದ ಹೋದ ಕಡೆಯಲ್ಲೆಲ್ಲಾ ಹೇಳುತ್ತಿದ್ದಾರೆ. ರಾಜ್ಯದ ಹೆಸರು ಸಂಪೂರ್ಣವಾಗಿ ಕರ್ನಾಟಕ ಆಗಬೇಕು ಮತ್ತು ಮಹಾಜನ್ ವರದಿ ಬಗ್ಗೆ ನಾವು ಒಮ್ಮತದಿಂದ ಇದ್ದೇವೆ ಅದು ಕಾರ್ಯಗತವಾಗಬೇಕು ಎಂದು. ಆಲ್ಲದೆ ಅವರು ಮೊನ್ನೆ ಬೆಂಗಳೂರಿನಲ್ಲಿ ಒಂದು ಕಡೆ ಭಾಷಣ ಮಾಡುತ್ತಾ ನಾನು ಸಂಪೂರ್ಣವಾಗಿ ರಾಜ್ಯದ ಹೆಸರು ಕರ್ನಾಟಕ ಎಂದು ಇಡಲು ಒಪ್ಪಿದ್ದೇನೆ ಮತ್ತು ಶಾಸನಕರೂ ಕೂಡ ಬೆಂಬಲ ಕೊಟ್ಟಿದ್ದಾರೆ ಎಂದು ಹೇಳಿದರು. ಅದು ಪತ್ರಿಕೆಗಳಲ್ಲೂ ಕೂಡ ದಪ್ಪ ಅಕ್ಷರದಲ್ಲಿ ಬಂದಿದೆ. ಇಷ್ಟು ಧೈರ್ಯದಿಂದ ಇರತಕ್ಕ ಮಂತ್ರಿಮಂಡಲಕ್ಕೆ ನಾನು ಒಂದು ವಿಷಯ ಹೇಳುವುದು ಏನೆಂದರೆ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಪಂತ್ ರವರು ಅನೇಕ ಸಾರಿ ಇಲ್ಲಿಗೆ ಬಂದರು, ಹೋದರು. ಆಲ್ಲದೆ ಮಾನ್ಯ ಮಂತ್ರಿಗಳೂ ಕೂಡ ಈ ಮಹಾಜನ್ ಕಮೀಷನ್ನಿನ ರಿಪೋರ್ಟ್ ಬಗ್ಗೆ ಮಾತನಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಹೋಗಿದ್ದರು. ಕೇಂದ್ರ ಸರ್ಕಾರದಲ್ಲಿ ಏನೋ ಒಂದು ಹೊಸ ಸೂತ್ರ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಆದುದರಿಂದ ಮಾನ್ಯ ಮಂತ್ರಿಗಳು ನಮ್ಮ ರಾಜ್ಯಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ. ಮಹಾಜನ್ ಕಮೀಷನ್ ವರದಿ ಏನು ಇದೆಯೋ ಅದು ಈ ಸಭೆಯಲ್ಲಿ ಸಂಪೂರ್ಣವಾಗಿ ಒಪ್ಪಿ ಇದು ಕಾರ್ಯಗತವಾಗಬೇಕು ಅಂತ ಏನೊಂದು ನರ್ಪ ಸಮ್ಮತವಾದ ತೀರ್ಮಾನವಾಗಿದೆಯೋ ಅದಕ್ಕೆ ತಾವು ಬದ್ಧರೇ? ನಾನು ಕಿತ್ತೂರ್‌ರವರ ಹೇಳಿಕೆಯನ್ನು ಅಕ್ಷೇಪಣೆ ಮಾಡುತ್ತಾ ಇಲ್ಲ. ಇದು ಮರಾಠಿ ಪೇಪರ್‌ನವರ ಕುತಂತ್ರ ಎಂದು ಹೇಳುತ್ತೇನೆ. ಆದುದರಿಂದ ಈ ಮಹಾಜನ್ ರಿಪೋರ್ಟ್ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವಿಗೆ ಹಿಂದೆ ಈ ಸಭೆಯಲ್ಲಿ ಮಾಡಿದ ತೀರ್ಮಾನಕ್ಕೆ ತಾವು ಬದ್ಧರೇ ಎಂದು ಸರ್ಕಾರದ ಪರವಾಗಿ ತಾವು ಹೇಳಿಕೆ ಕೊಡಬೇಕೆಂದು ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರು ಅವರ ಕೈಯಲ್ಲಿ ಒಂದು ಹೇಳಿಕೆಯನ್ನು ಕೊಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಅಧ್ಯಕ್ಷರಲ್ಲಿ ಒಂದು ವಿನಂತಿ. ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ ಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ನಾಲಿಗೆ ಹಿಡಿತದಲ್ಲಿರಬೇಕು ಎಂದು ಹೇಳಿದರು. ಮರಾಠಿ ಪತ್ರಿಕೆಯಲ್ಲಿ ಒಂದು ವಿಷಯ ಬಂದದ್ದು ನಿಜ ಎಂದು ಇಟ್ಟುಕೊಂಡು ಮಂತ್ರಿಗಳು ದಿನೈ ಮಾಡಬೇಕಾಗಿತ್ತು ಎಂದು ಅಪಾರ್ಥ ಮಾಡಿಕೊಂಡು ಈ ಮಾತನ್ನು ಬಳಸಿದ್ದು ಒರಟು ಶಬ್ದ ಎಂದು ನಾನು ಶಂಕಿಸುತ್ತೇನೆ. ಅವರಿಗೆ ಈ ರೀತಿ ಮಾತನಾಡಬಾರದು ಎಂದು ತಿಳಿಸಬೇಕು ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಅದು ಒರಟೇನಿಲ್ಲ, ಹಿಡಿತ ಇರಬೇಕು ಎಂದು ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಕಿತ್ತೂರ್‌ರವರಿಗೆ ಕನ್ನಡ ಬರದೇ ಇದ್ದರೆ ಅವರ ಮಾತೃಭಾಷೆಯಲ್ಲೇ ಹೇಳಲಿ, ನಾವು ಕೇಳುವುದಕ್ಕೆ ತಯಾರಾಗಿದ್ದೇವೆ. ಶ್ರೀ ಕಿತ್ತೂರ್‌ರವರು ಈ ಸಭೆಯಲ್ಲಿ ಇರುವುದರಿಂದ ಅವರು ಈ ಹೇಳಿಕೆಯನ್ನು ಕೊಟ್ಟಿದ್ದೇನೆ ಅಥವಾ ಇಲ್ಲ ಎನ್ನುವ ಒಂದು ಶಬ್ದವನ್ನಾದರೂ ಹೇಳುವುದಕ್ಕೆ ಆಗುವುದಿಲ್ಲವೇ? ಅವರ ಮಾತೃಭಾಷೆಯಲ್ಲಿ ಅವರ ಅಮ್ಮತವಾಣಿಯಲ್ಲಿ ಹೇಳಲಿ ಎಂದು ನಾವು ಒತ್ತಾಯ ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಶ್ರೀಮಾನ್ ಕೊಲ್ಲೂರು ಮಲ್ಲಪ್ಪನವರು ಒಂದು ಹೊಸ ಸೂತ್ರ ಇದೆ ಎಂದು ಹೇಳಿದರು. ಶ್ರೀಮಾನ್ ಕಿತ್ತೂರ್‌ರವರು ಗೋಮಾಂತಕ ಸ್ಟೇಟ್ ಆಗಬೇಕು ಎಂದು ಹೇಳಿರುವುದು ಮರಾಠಿ ಪತ್ರಿಕೆಯಲ್ಲಿ ವರದಿಯಾಗಿದೆ. ಒಬ್ಬರು ತಮ್ಮ ಪಕ್ಷದ ಸದಸ್ಯರಾಗಿದ್ದು ಇನ್ನೊಬ್ಬರು ತಮ್ಮ ಪಕ್ಷದ ಮಂತ್ರಿಗಳಾಗಿದ್ದು ಈ ಮಹಾಜನ್ ವರದಿ ಬಗ್ಗೆ ಒಂದು ಸ್ಪಷ್ಟೀಕರಣ ಚಿತ್ರ ಇಡುವುದನ್ನು ಬಿಟ್ಟು ಈ ರೀತಿ ಅಪಾರ್ಥ ಬರುವ ರೀತಿಯಲ್ಲಿ ಹೇಳಿಕೆ ಕೊಟ್ಟು ಅದು ಪತ್ರಿಕೆಯಲ್ಲಿ ವರದಿಯಾಗುವಂತೆ ಮಾಡಿದ್ದಾರೆ. ಆದುದರಿಂದ ಸರ್ಕಾರದವರು ಇದನ್ನು ತಡೆಗಟ್ಟುವುದಕ್ಕೆ ಮುಂದೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಧ್ಯಕ್ಷರೇ, ಶ್ರೀ ಕಿತ್ತೂರ್‌ರವರು ಈ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಅದು ಪತ್ರಿಕೆಯಲ್ಲಿ ವರದಿಯಾಗಿದೆ ಎನ್ನುವ ವಿಷಯಕ್ಕೆ ಮಾತ್ರ ಈಗ ನಾನು ಹೇಳುತ್ತಾ ಇರುವುದು ಸೀಮಿತವಾಗಿದೆ. ಅವರು ನಾನು ವರದಿ ಮಾಡಿರುವುದು ಇಲ್ಲ ಎಂದು ಹೇಳುತ್ತಾ ಇರುವಾಗ, ಮಾನ್ಯ ಸದಸ್ಯರುಗಳು ಅವರು ವರದಿ ಮಾಡಿದ್ದಾರೆ ಎಂದು ಒಂದು ಊಹಾಪೋಹದ ಮೇಲೆ ಮರಾಠಿ ಪತ್ರಿಕೆಯ ವರದಿ ಮೇಲೆ ಹೇಳಿದ್ದಾರೆ. ಕನ್ನಡಿಗರ ಮುಖಾಂತರ ಕೆಲವರು ಈ ಒಂದು ಹೇಳಿಕೆಯನ್ನು ಕೊಡಿಸಿರುತ್ತಾರೆ. ಈಗ ಶ್ರೀ ಕಿತ್ತೂರ್‌ರವರು ಖಂಡಿತವಾಗಿ ಅದು ಸರಿಯಲ್ಲ ಎಂದು ಹೇಳುವಾಗ ಬಾಕಿ ಪ್ರಶ್ನೆ ಯಾವುದೂ ಉದ್ಭವಿಸುವುದಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಉತ್ತರಕೊಡಬೇಕೆಂದು ಶ್ರೀ ಕಾಗೋಡು ತಿಮ್ಮಪ್ಪನವರು, ಶ್ರೀ ಕೋಣಂದೂರು ಲಿಂಗಪ್ಪನವರು ಕೇಳಿರತಕ್ಕದ್ದು. ಅವರ ಅಪೇಕ್ಷೆಯನ್ನನುಸರಿಸಿ ನಾನು ಮುಖ್ಯಮಂತ್ರಿಗಳ ಪರವಾಗಿ ಏವರಣ್ ಕೊಡುತ್ತಿದ್ದೆ. ಆದುದರಿಂದ ಶ್ರೀ ಕೆತ್ತೂರ್ ಅವರು ಉತ್ತರ ಕೊಡುವ ಪ್ರಶ್ನೆ ಬರುವುದಿಲ್ಲ. ಶ್ರೀ ದೇವೇಗೌಡರು ಸ್ವಲ್ಪ ಹತೋಟಿ ಇರಬೇಕೆಂದು ಹೇಳಿದರು. ಹತೋಟಿ ಇರಬೇಕಾದ್ದು ಅವಶ್ಯಕವೆಂದು ಒಪ್ಪಿಕೊಳ್ಳುತ್ತೇನೆ. ಆ ಪ್ರಶ್ನೆಯೇ ಇಲ್ಲದೆ ಇರುವಾಗ, ಈ ವಿಷಯವನ್ನೇ ಹೇಳಿಲ್ಲ ಎನ್ನುವಾಗ ಹತೋಟಿ ಪ್ರಶ್ನೆ ಎಲ್ಲಿ ಬಂತು ? ಬಾಕ ವಿಷಯ ಗಳನ್ನೆಲ್ಲ ಪ್ರಸ್ತಾಪ ಮಾಡಿದ್ದಾರೆ. ಆ ಹೇಳಿಕೆಯಲ್ಲಿ ಇನ್ನು ಬೇರೆ ಪ್ರಶ್ನೆ ಉದ್ಭವವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ, ಅದೇನೆಂದರೆ ಮಹಾಜನ್ ಕಮಿಷನ್ ವರದಿ ವಿಚಾರದಲ್ಲಿ ಸರ್ಕಾರದ ಧೋರಣೆ ಅಚಲವಾಗಿದೆ, ಬದಲಾವಣೆಯಿಲ್ಲ ಎಂದು ಹೇಳಿದ್ದಾರೆ.

10-00 A.M.

ಶ್ರೀ ಎಚ್. ಡಿ. ದೇವೇಗೌಡ.—ನಿನ್ನೆ ಸಂಜೆ ಸಭೆ ಏಳುವುದಕ್ಕೆ ಮುಂಚೆ ಎರಡು ಫೈಲು ವಿಷಯ ಪ್ರಸ್ತಾಪ ಮಾಡಿದ್ದೆ. ಒಂದು ಮಂತ್ರಿಗಳು ಮನೆಯನ್ನು ಕಾನೂನು ಬಾಹಿರವಾಗಿ ಕಟ್ಟಿರತಕ್ಕುದು, ಎರಡನೆಯದು ಇನ್ನೊಬ್ಬರ ಖಾಸಗಿ ಮನೆಯನ್ನು ಹೊಸಹಳ್ಳಿ ರೇ ರೌಟ್‌ನಲ್ಲಿ ಕೆಡವಿಸಿರುವುದಕ್ಕೆ ಸಂಬಂಧಪಟ್ಟುದು. ಈ ಎರಡು ಫೈಲುಗಳನ್ನೂ ಮಂತ್ರಿಗಳು ಈ ದಿವಸ ಕೊಡುತ್ತೇನೆಂದು ಹೇಳಿದ್ದರು.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಹಾಗೆ ಹೇಳಲಿಲ್ಲ. ನನಗೂ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಸ್ವಲ್ಪ ಚಕಮಕಿ ಆಯಿತು. ಅದರಲ್ಲಿ ಫೈಲು ತೋರಿಸಿ ಎಂದು ಹೇಳಿದಾಗ ಆಫೀಸಿಗೆ ಬಂದರೆ ತೋರಿಸುತ್ತೇನೆಂದು ಮಾತ್ರ ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಏನು ಹೇಳಿದರು ಎನ್ನುವುದು ಪ್ರೊಸೀಡಿಂಗ್ಸ್‌ನಲ್ಲಿದೆ. ಅದನ್ನು ತಾವು ದಯವಿಟ್ಟು ನೋಡಬಹುದು.

ಇದು ಮಂತ್ರಿಗಳಿಗೂ ಮತ್ತು ನನಗೂ ಸಂಬಂಧಪಟ್ಟ ಖಾಸಗೀ ವ್ಯವಹಾರವಲ್ಲ, ಸಭೆಯ ಕಾರ್ಯಕರಾಪ ನಡೆಯುವ ಸಂದರ್ಭದಲ್ಲಿ ನಡೆದದ್ದು. ಮಾನ್ಯ ಅಧ್ಯಕ್ಷಣಿಯವರು ಪ್ರೊಸೀಡಿಂಗ್ಸ್ ತರಿಸಿ ಏನು ನಡೆದಿದೆ ಎನ್ನುವುದರ ಬಗ್ಗೆ ಮಾಹಿತಿ ಕೊಟ್ಟರೆ ಸಾಕು. ಒಂದು ವೇಳೆ ಹಾಗೆ ಹೇಳದೆ ಇದ್ದರೆ, ನಾನು ಆ ವಿಚಾರವನ್ನು ಮುಂದುವರಿಸುವುದಿಲ್ಲ. ಸಭೆಯಲ್ಲಿ ಏನು ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಒಂದು ವೇಳೆ ಮಂತ್ರಿಗಳು ಆದೇಶದ ಧಾರಣೆಯಲ್ಲಿ ಹಾಗೆ ಹೇಳಿದ್ದರೆ, ಕಾರ್ಯ ಕರಾಪವ ನಿಯಮಗಳಿಗೆ ಹಾಗೆ ಫೈಲನ್ನು ಸಭೆಯ ಮುಂದೆ ಇಡುವುದು ವಿರೋಧವಾಗಿದ್ದರೆ, ಅವರು ಹೇಳಿದ ಮಾತಿನಂತೆ ಸಭೆಯ ಮುಂದೆ ಇಡಬೇಕೆಂದು ಒತ್ತಾಯ ಮಾಡುವುದಿಲ್ಲ.

ನಾನು ಒಂದು ಮನವಿ ಮಾಡುತ್ತೇನೆ. ನಾನು ಈ ಸ್ಥಾನದಲ್ಲಿ ಕುಳಿತುಕೊಂಡು ಒಂದು ಆಪಾದನೆ ಮಾಡುವಾಗ ಜವಾಬ್ದಾರಿ ಇಲ್ಲದೆ ಮಾಡಿದ್ದೇನೆ ಎನ್ನುವ ಮಾತು ಬಂತು. ಅದರಿಂದ ನನ್ನ ಮನಸ್ಸಿಗೆ ಸ್ವಲ್ಪ ನೋವಾಗಿದೆ. ನಾನು ಮಾತನಾಡತಕ್ಕ ಕಾಲದಲ್ಲಿ ಸ್ವಲ್ಪ ಹಿಂದು ಮುಂದೆ ಆಲೋಚನೆ ಮಾಡಿ ಮಾತನಾಡುತ್ತೇನೆ. ಈ ಸ್ಥಾನದಲ್ಲಿರುವವರಿಗೂ ನಾನು ಒಂದು ಆಪಾದನೆ ಮಾಡಿದರೆ ಆಧಾರ ಸಹಿತವಾಗಿ ಮಾಡುತ್ತೇನೆ. ಆಧಾರ ರಹಿತವಾದ ಆಪಾದನೆ ಮಾಡುತ್ತಿದ್ದರೆ ಈ ಸ್ಥಾನದಲ್ಲಿ ನಾನು ಕುಳಿತುಕೊಳ್ಳುವುದಕ್ಕೆ ಲಾಯಖ್ ಅಲ್ಲ. ತಾವು ಫೈಲನ್ನು ತರಿಸಿ ಅದರ ವಿವರಗಳನ್ನೆಲ್ಲ ನಾನು ಕೊಡುತ್ತೇನೆ. ಹಿಂದೆ ಅಡ್ವೊನಿಸ್ಟ್ರೇಟರು ಇವರ ಮನೆಯನ್ನು ಒಡೆಯ ಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಅವರು ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ. ಈ ಹೊತ್ತು ಕೋರ್ಟಿನಲ್ಲಿ ಮೊಕದ್ದಮೆ ಇದೆ. ಪ್ಲಾನ್ ಮತ್ತು ಅಂದಾಜಿಗೆ ವಿರುದ್ಧವಾಗಿ ಇವರು ಮನೆಯನ್ನು ಕಟ್ಟಿದ್ದಾರೆ. ಅದನ್ನು ಕೆಡವಬೇಕು ಎನ್ನುವ ಬಗ್ಗೆ ನೋಟೀಸು ಕೊಟ್ಟ ಮೇರೆ ಇವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಆ ಫೈಲನ್ನು ತರಿಸಿ ತಾವು ವೆರಿಫೈ ಮಾಡಿ. ಅದರಲ್ಲಿ ಸತ್ಯಾಂಶವಿದ್ದರೆ, ನಾನು ಮಾಡಿರತಕ್ಕ ಆಪಾದನೆ ನ್ಯಾಯವಾಗಿದ್ದರೆ, ತಮ್ಮ ಮನಸ್ಸಿಗೆ ಸಮಾಧಾನವಾದರೆ ಆ ವಿಷಯವನ್ನು ಸಭೆಗೆ ತಿಳಿಸಿ, ನಾನು ಹೇಳಿರುವುದು ನ್ಯಾಯ ವಾಗಿಲ್ಲದೆ ಇದ್ದರೆ ಸಭೆಯು ಕ್ಷಮೆ ಕೇಳುವುದಕ್ಕೆ ನಾನು ತಯಾರಾಗಿದ್ದೇನೆ. ಅದಕ್ಕೆ ನನಗೆ ನಾಚಿಕೆ

(ಶ್ರೀ ಎಚ್. ಡಿ. ದೇವೇಗೌಡ)

ಯಾಗುವುದಿಲ್ಲ. ಆದ್ದರಿಂದ ತಾವು ಎರಡೂ ಫೈಲುಗಳನ್ನು ತರಿಸಿ, ಪರಿಶೀಲನೆ ಮಾಡಿ, ಏನು ನಿರ್ಣಯ ಕೊಡಬೇಕೋ ಅದನ್ನು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬನವಲಂಗಪ್ಪನವರ ಮನೆ ಮಾತ್ರವಲ್ಲ. ಇಂಥ ಇನೂ ಅನೇಕ ಮನೆಗಳು ಇವೆ. ಬೆಂಗಳೂರು ನಗರ ಕಾಂಗ್ರೆಸ್ಸಿನ ಅಧ್ಯಕ್ಷರು ಸುಭಾಸ್ ನಗರದಲ್ಲಿ ನ್ಯಾಷನಲ್ ಫೇರ್ ಲೈಸೆನ್ಸ್ ತೆಗೆದುಕೊಳ್ಳದೆ ನಡೆಸಿದ್ದಾರೆ. ಇದಕ್ಕೆ ಕಾರ್ಪೊರೇಷನ್ ಮೇಯರ್ ಅವರು ಹೇಟ್ಸನ್, ರಾಜ್ಯದ ಹಿಂದಿನ ರಾಜ್ಯಪಾಲರಾದ ಧರ್ಮವೀರ ಅವರು ಚೀಫ್ ಪೇಟ್ಸನ್. ಕಾರ್ಪೊರೇಷನ್ನಿನ ಉನ್ನತ ಅಧಿಕಾರಿಗಳನ್ನು ಮತ್ತು ಕೆಲವು ಕಾರ್ಪೊರೇಟರುಗಳನ್ನು ಇದರಲ್ಲಿ ಹಾಕಿಕೊಂಡು ಲೈಸೆನ್ಸ್ ಇಲ್ಲದೆ ನ್ಯಾಷನಲ್ ಫೇರ್ ನಡೆಸಿದ್ದಾರೆ. ಮಾಜಿ ಮಂತ್ರಿಗಳು, ಬಹಳ ಜವಾಬ್ದಾರಿಯುತವಾದ ಸ್ಥಾನದಲ್ಲಿರುವವರು, ನಿಮ್ಮ ಪಕ್ಷದ ಕಂಬದಂತೆ ಇದ್ದವರು, ಈಗಿನ ಮೇಯರ್ ಅವರು, ಹಿಂದಿನ ಮೇಯರ್ ಅವರು ಎಲ್ಲ ಇದ್ದಾರೆ. ಅದರ ಜೊತೆಗೆ ಈಗಿರತಕ್ಕ ಮೇಯರ್ ಅವರು ಮನೆ ಕಟ್ಟಿಸುತ್ತಿದ್ದಾರೆ. ಅದರ ಫೈಲು ಕೂಡ ತರಿಸಬೇಕು. ಈ ರಾಜ್ಯದ ಎಲ್ಲ ಮಂತ್ರಿಗಳು, ಹಿಂದೆ ಇದ್ದವರು, ಸದಾಶಿವನಗರದಲ್ಲಿ ಅಧಿಕಾರಿಗಳು ಕಟ್ಟಿಸಿರುವ ಮನೆಗಳು, ಇವುಗಳಿಗೆ ಸಂಬಂಧಪಟ್ಟ ಫೈಲುಗಳನ್ನೆಲ್ಲ ತರಿಸಿ ನೋಡಿದರೆ ಯಾವ ವಿಧವಾದ ಅಕ್ರಮಗಳು ನಡೆದಿವೆ ಎನ್ನುವುದು ಬೆಳಕಿಗೆ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಿನ್ನೆ ಸಭೆಯಲ್ಲಿ ನಡೆದಿರತಕ್ಕ ಎರಡು ಘಟನೆ ಬಗ್ಗೆ ಫೈಲುಗಳನ್ನು ತರಿಸಿ ಪರಿಶೀಲನೆ ಮಾಡಿ ಅದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳುವ ವಿಚಾರವನ್ನು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಬಿ. ಸಿ. ಡಿ. ಸಿ. ಸಿ. ಅಧ್ಯಕ್ಷರಾಗಿರುವವರು ಜಯನಗರದ ಒಂದು ಮೂರೆಯಲ್ಲಿ ಒಂದು ಥಿಯೇಟರ್ ಕಟ್ಟಿಸುತ್ತಿದ್ದಾರೆ. ಅದಕ್ಕೆ ಸರಿಯಾದ ಲೈಸೆನ್ಸ್ ತೆಗೆದುಕೊಂಡಿಲ್ಲ. ಸರ್ಕಾರ ಕಣ್ಣುಮುಚ್ಚಿಕೊಂಡಿದೆ. ಸಂಬಂಧಪಟ್ಟ ಮಂತ್ರಿಗಳು, ಮೇಯರ್, ಮಂತ್ರಿಗಳು, ಮಾಜಿ ಮಂತ್ರಿಗಳು, ಶಾಸಕರು ಮನೆಗಳನ್ನು ಕಟ್ಟಿದ್ದಾರೆ.....

ಅಧ್ಯಕ್ಷರು.—ತಾವೆಲ್ಲ ದಯವಿಟ್ಟು ಕುಳಿತುಕೊಳ್ಳಿ. ಏನಾದರೂ ಕಂಪ್ಲೈಂಟ್ಸ್ ಇದ್ದರೆ ನನಗೆ ಕಳುಹಿಸಿ. ತಮಗೆಲ್ಲ ಗೊತ್ತಿರುವ ಹಾಗೆ ಫೈರ್ ತರಿಸಿ ಸಭೆಯ ಮುಂದೆ ಇಟ್ಟರೆ ಅಡ್ಮಿನಿಸ್ಟ್ರೇಷನ್ ನಡೆಯುಬೇಕೋ ಬೇಡವೋ ? ಫೈರ್ ತರಿಸಿ ಅದನ್ನು ಸಭೆಯ ಪ್ರಾಪರ್ಟಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏನಿದೆ ಎನ್ನುವುದನ್ನು ಬರೆದು ನನಗೆ ಕಳುಹಿಸಿದರೆ, ಫೈರ್ ತರಿಸಿ ನೋಡಿ ನಿಮಗೆ ನಾನು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಫೈರ್ ತರಿಸಿ ಇಡುವುದು ಸಭೆಯ ನಿಯಮಾವಳಿಗೆ ವಿರೋಧವಾಗಿದ್ದರೆ ನಾನು ಒತ್ತಾಯ ಮಾಡುವುದಿಲ್ಲ. ನಾನು ಮಾಡಿರತಕ್ಕ ಅಪಾದನೆಯಲ್ಲಿ ಹುರುಳಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಫೈರ್ ತರಿಸಿ ತಾವು ಸಮಾಧಾನ ಮಾಡಿಕೊಳ್ಳಿ ಮತ್ತು ಸತ್ಯಾಂಶವನ್ನು ಸಭೆಗೆ ತಿಳಿಸಿ ಎಂದು ಕೇಳಿದೆ.

MADAM SPEAKER.—That topic is finished; No more comments in continuation, please.

Sri C. M. ARUMUGAM.—On the points raised by Sri Vatal Nagaraj, we agree with what you have stated. You may see the file. But at the same time, as Sri Vatal Nagaraj urged, you must also kindly see the files relating to both the Mayor and former Deputy Minister Sri R. Dayanand Sagar. Sri Sagar has also conducted a National Fair without a license; he was also constructing a theatre. Sri Vatal Nagaraj has made pointed reference to these two acts of Sri Dayananda Sagar also.

MADAM SPEAKER.—Why do you repeat what Sri Nagaraj has stated? Let us hear what the Government has to say.